ಬಂದೊಂದು ಪತ್ರಿಕೆಗೂ ನಿಶ್ಚಿಪ್ತ ಮಾಡಿರುವ ಪೂರ್ಣಾಂಕದಲ್ಲಿ ಕೇಕಡಾ 40ಕ್ಕೆ ಕಡಮೆ ಇಲ್ಲದೆ ಅಂಕಗಳನ್ನು ಪಡೆಯದವರು ಪರೀಕ್ಷೆಯಲ್ಲಿ ತೇರ್ಗಡೆಯಾದಂತೆ ಭಾವಿಸಲ್ಪಡುವುದಿಲ್ಲ. ತೇರ್ಗಡೆಯಾದವರಲ್ಲಿ, ಒಟ್ಟು ಅಂಕ ಸಂಖ್ಯೆಯಲ್ಲಿ ಕೇಕಡಾ 60ನ್ನು ಪಡೆದವರು ಮೊದಲನೇ ವರ್ಗದಲ್ಲಿಯೂ ಉಳಿದವರು ಎರಡನೇ ವರ್ಗದಲ್ಲಿಯೂ ಸೇರಿಸಲ್ಪಡುವರು.

ಖರಹ ಪರೀಕ್ಷೆಗಳ ಫಲಿತಾಂಕವು 1896ನೇ ಇಸವಿ ಜೂರ್ ತಿಂಗಳು 12ನೇ ತಾರೀಖನ್ನು ಅತಿಕ್ರಮಿಸದೆ ಪ್ರಕಟಿಸಲ್ಪಡುತ್ತದೆ.

ವ್ಯವಹಾರಿಕ ಪರೀಕ್ಷೆಯು (Practical test) 1896ನೇ ಇಸವಿ ಜೂರ್ ತಿಂಗಳು 17ನೇ ತಾರೀಖಿನಲ್ಲಿಯೂ ಮುಂದಿನ ದಿವಸಗಳಲ್ಲಿಯೂ ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ನಡೆಯಿಸಲ್ಪಡುವುದು.

ಖರಹ ಪರೀಕ್ಷೆಯಲ್ಲಿ ತೇರ್ಗಡೆಯಾಗದವರನ್ನು ವ್ಯವಹಾರಿಕ ಪರೀಕ್ಷೆಗೆ ಸೇರಿಸುವುದಿಲ್ಲ.

ಇದರಡಿ ಕಂಡ ನಿಬಂಧನೆಗಳಿಗೆ ಪರೀಕ್ಷ್ಯರು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು.

(1) ಪರೀಕ್ಷೆಯು ಆರಂಭಿಸುವದಕ್ಕೆ ನಿಶ್ಚಿತವಾದ ಕಾಲ ಮೊದಲು ಅರ್ಧ ಘಂಟೆ ಆಗುವ ವರೆಗೂ ಪರೀಕ್ಷಾ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ಪರೀಕ್ಷ್ಯನಿಗೂ ಅಪ್ಪಣೆ ಕೊಡಲ್ಪಡುವದಿಲ್ಲವು. ಮತ್ತು ಅಂಥಾ ಅರ್ಧ ಘಂಟೆ ಕಳೆದ ಮೇಲೆ ಬರುವ ಯಾವ ಪರೀಕ್ಷ್ಯರಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

(2) ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷಾ ಕೊಠಡಿಯನ್ನು ಬಂದಾವರ್ತಿ ಬಿಟ್ಟು ಬಂದನಂತರ ಪುನಹ ಪ್ರವೇಶಿಸಲು ಯಾವ ಪರೀಕ್ಷ್ಯನಿಗೂ ಅವಕಾಶ ಉಂಟಾಗಲಾರದು ಅಲ್ಲದೆ ತನ್ನ ಉತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟು ವಿನಹ ಪರೀಕ್ಷಾ ಸ್ಥಳವನ್ನು ಬಿಟ್ಟು ಬರುವುದಕ್ಕೆ ಸಹ ಅವಕಾಶ ಕೊಡುವದಿಲ್ಲವು.

(3) ಯಾವ ಪರೀಕ್ಷ್ಯನೇ ಆಗಲಿ ಮತ್ತೊಬ್ಬ ಪರೀಕ್ಷ್ಯನೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ಯಾವ ವಿಧ ದಿಂದಲಾದರೂ ಬಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ಪರೀಕ್ಷ್ಯನು ಕೂಡ್ಲೆ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ಸಂಗತಿಯು ಇನ್ಸ್ಪೆಕ್ಟರ್ ಜನರಲ್ ಸಾಹೆಬರವರಿಗೆ ತಿಳಿಸಲ್ಪಡುವುದು.

(4) ಪರೀಕ್ಷಾ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ, ರೂಲರುಗಳನ್ನಾಗಲಿ, ಪುಸ್ತಕಗಳನ್ನಾಗಲಿ, ಬರದ ಕಾಗದಗಳನ್ನಾಗಲಿ, ಅಥವಾ ಇನ್ಯಾವ ವಿಧವಾದ ಕಾಗದ ಪತ್ರವನ್ನಾಗಲಿ, ತೆಗದುಕೊಂಡು ಹೋಗಲು ಯಾವ ಪರೀಕ್ಷ್ಯನಿಗೂ ಯಾವ ಸಂದರ್ಭದಲ್ಲಿಯೂ ಅವಕಾಶ ಕೊಡಲ್ಪಡುವುದಿಲ್ಲವು. ಯಾವ ಪರೀಕ್ಷ್ಯನಾಗಲಿ, ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವದಾಗಿಯಾಗಲಿ ಅಥವಾ ಇನ್ಯಾವ ಅಕೃತ್ಯಗಳನ್ನು ನಡಿಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ಪರೀಕ್ಷ್ಯನು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ನಡವಳಿತವು ಇನ್ಸ್ಪೆಕ್ಟರ್ ಜನರಲ್ ಸಾಹೆಬರವರಿಗೆ ರಿಪೋರ್ಟು ತಿಳಿಸಲ್ಪಡುವುದು.

(5) ಪರೀಕ್ಷ್ಯನು ತನ್ನ ಪತ್ರವನ್ನು ಪೂರೈಸಿದ ಮೇಲ್ಕೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರ್ವಿಟೆಂಡೆಂಟರು ಕಾಗದಗಳನ್ನು ತೆಗದುಕೊಳ್ಳುವ ವರಿಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ಪರೀಕ್ಷ್ಯನೇ ಆಗಲಿ ಮೇಲೆ ಹೇಳಿದ ರೀತಿ ನಡಿಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

(6) ಪರೀಕ್ಷ್ಯನ ಹೆಸರು ರಿಜಿಸ್ಟರ್ ನಂಬರ್ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

(7) ಪ್ರಶ್ನೆ ಪತ್ರಗಳು ವಿನಹ ಯಾವ ಕಾಗದಗಳನ್ನಾಗಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ಪರೀಕ್ಷ್ಯರಿಗೆ ಅಪ್ಪಣೆ ಕೊಡುವದಿಲ್ಲವು.

(8) ಪರೀಕ್ಷ್ಯರು ಕಾಗದಗಳನ್ನ ಹರಿಯದಂತೆಯೂ ಮತ್ತು ನೆಲದ ಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. ಕೆಟ್ಟುಹೋದ ವಿಶಿಷ್ಟ ಕಾಗದಗಳೂ ಪರೀಕ್ಷ್ಯರು ಬರೆಯುತ್ತಲಿದ್ದ ಮೇಜಿನಮೇಲೆಯೇ ಬಿಡಲ್ಪಡಬೇಕು.

ಪಿ. ಎಸ್. ಪೂರ್ಣಯ್ಯ,
ತಾ|| ಇನ್ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ತುಮಕೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ಇದರಿಂದ ಸಕಲಜನಗಳಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟಿನಲ್ಲಿ ಇರೇನಲ್ಲಿ ನಮೂದಾಗುವ ಸ್ಟೇಪ್‌ಫಾರೆಸ್ಟುಗಳು ವಿನಹ, ತುಮಕೂರು, ಮದ್ದಗಿರಿ, ಚಿಕ್ಕನಾಯಿಕನಹಳ್ಳಿ, ತಿರ್ಥಾ, ಗುಬ್ಬಿ, ತಿಪಟೂರ್, ಪಾವಗಡ, ಕುಣಿಗಲ್ ಈ ತಾಲ್ಲೂಕುಗಳ ಮತ್ತು ಕೊರಟಿಗೆರೆ, ಹುಳಿಯಾರ್, ಹುರುವೆಕೆರೆ ಸಬ್ ತಾಲ್ಲೂಕುಗಳಲ್ಲಿರುವ ಡಿಸ್ಟ್ರಿಕ್ಟ್ ಫಾರೆಸ್ಟುಗಳ ಬಾಬತು ಅರಗಿನ ಕಂಟ್ರಾಕ್ಟ್ ಫಾರೆಸ್ಟುಗಳ ಬಾಬತು ಅರಗಿನ ಕಂಟ್ರಾಕ್ಟ್ 1896ನೇ ಇಸವಿ ಜುಲೈ ಗುರ್ಯೇ ಲಾಗಾಯತು 1897ನೇ ಜೂರ್ ಆಖೈರವರಿಗೆ ಒಂದು ವರುಷ ಅಂದರೆ 1896—97ನೇ ಸಾಲಿಗೆ ಜಡದರಬಾಸ್ತು ದಾರ್‌ಗೆ 1896ನೇ ಇಸವಿ ಜೂರ್ ತಾರೀಖು 1ರಲ್ಲು ಮಧ್ಯಾನ್ಹ 12 ಘಂಟೆಗೆ ತುಮಕೂರು ಡಿಸ್ಟ್ರಿಕ್ಟ್ ಆಫಿಸಿನಲ್ಲಿ ಡೆಪ್ಯುಟಿ ಕಮ್ಮಿಷನರ್ ಅಥವಾ ಅವರಿಂದ ನೇಮಿಸಲ್ಪಡುವ ಅಸಿಸ್ಟೆಂಟ್ ಕಮ್ಮಿಷನರ್ ರೂಬರೂ ವಿಕ್ರಯಿಸಲ್ಪಡುವದು.

1. ದೇವರಾಯದುರ್ಗ
2. ಮದ್ದಗಿರಿ
3. ಕೋಳಿಕಲ್
4. ಭುಕ್ಕಾಪಟ್ಣ
5. ಮಂಜಲದೊರೆ
6. ಹುಲಿಯೂರದುರ್ಗ
7. ಕಂಪಲಾಪುರ
8. ಕುದುರೆಕಣಿವೆ
9. ಶೀರ್ಥರಾಂಪುರ

II. ಚಡ ದರಖಾಸ್ತುದಾರರು ತಮ್ಮ ದರಖಾಸ್ತು ಮಂಜೂರಾದ ನಂತರ ಮಂಜೂರಾದ ಕಂಟ್ರಾಕ್ಟು ವಟ್ಟು ಮೊಬಲಗಿನ ನಾಲ್ಕು ತಿಂಗಳ ಖಿಸ್ತುಗಳಿಗೆ ಸವನಾದ ಮೊಬಲಗು ನಗಡಾಗಲಿ ಅಥವಾ ಕರ್ಜಿತಿ ನೋಟಾಗಲಿ ಹಾಜರ್ಮಾಡತಕ್ಕದ್ದು, ಹಾಗೆ ಮಾಡಲಿಕ್ಕೆ ತಪ್ಪಿದ ಪಕ್ಷ ಸದರೀ ಕಂಟ್ರಾಕ್ಟು ಕೂಡ್ಲೆ ಪುನಹ ಹರಾಜು ಹಾಕಲ್ಪಟ್ಟು ಆ ಮೂಲಕ ಸರ್ಕಾರಕ್ಕೆ ಉಂಟಾಗುವ ಲುಕ್ಸಾನಿಗೆ ಅವರನ್ನು ಗುರಿಮಾಡಲಾದೀತು.

III. ಮಂಜೂರಾದ ದರಖಾಸ್ತುದಾರರು 1896ನೇ ಜುಲೈ 1ನೇ ತಾರೀಖಿನಲ್ಲಿ ಕಂಟ್ರಾಕ್ಟು ಕೆಲಸದ ಮೇಲೆ ಪ್ರವೇಶಿಸಿ ತಮ್ಮ ಮೊದಲನೆ ಮಾಹೆ ಖಿಸ್ತನ್ನು 1896ನೇ ಇಸವಿ ಆಗಸ್ಟು 15ರಲ್ಲಿ ಆಗಲಿ ತತ್ಪೂರ್ವಆಗಲಿ ಪಾವತಿ ಮಾಡತಕ್ಕದ್ದು. ಆ ತರುವಾಯ ಪ್ರತಿ ಮಾಹೆ ಖಿಸ್ತು ಆ ತಿಂಗಳು ಕಳದ ಮಾರನೆತಿಂಗಳ 15ನೇ ತಾರೀಖಿನಲ್ಲಿ ಆಗಲಿ ತತ್ಪೂರ್ವಆಗಲಿ ಪಾವತಿ ಮಾಡತಕ್ಕದ್ದು ಅಂಥಾ ಮಾಸೆವಾರಿ ಖಿಸ್ತುಗಳು ಡಿಪಾಜಟ್ಟು ಇಟ್ಟ ಮೊಬಲಗ್ಯೆ ಸಂಬಂಧವಿಲ್ಲದೆ ಪ್ರತ್ಯೇಕವಾಗಿ ಪಾವತಿ ಮಾಡತಕ್ಕದ್ದು. ಹಾಗೆ ಪ್ರತಿಮಾಹೆ 15ನೇ ತಾರೀಖಿನ ಒಳಗೇನೇ ಖಿಸ್ತು ಮೊಬಲಗು ಪಾವತಿಮಾಡದೆ ತಪ್ಪಿದಲ್ಲಿ ಆ ಲಾಗಾಯಿತು ಅಂಥಾ ಖಿಸ್ತು ಮೊಬಲಗ್ಯೆ ಸಾಲಿಯಾನಾ ಕೇಕಡಾ 6 ರೂಪಾಯಿನಂತೆ ಬಡ್ಡಿ ದಾಖಲ್ಮಾಲ್ಪಡುವದು.

IV. ಕಂಟ್ರಾಕ್ಟುದಾರ್ರು ಕೊಡತಕ್ಕ ಮಾಹೆವಾರಿ ಖಿಸ್ತುಗಳ ಮೇಲೆ ರೂಪಾಯಿ ವಂದಕ್ಕೆ ವಂದಾಣೆ ಮೇರೆಗೆ ಲೋಕಲ್ ಸೆಸ್ಸನ್ನು ಕೊಡಬೇಕು.

V. ಅವಿಚ್ಛಿನ್ನವಾಗಿ (2) ಯರಡು ತಿಂಗಳವರಿವಿಗೂ ಸದರೀ ಖಿಸ್ತು ಕೊಡಲಿಕ್ಕೆ ತಪ್ಪಿದರೂ ಅಥವಾ ಸಾವಕಾಶ ಮಾಡಿದರೂ ಸದರೀ ಕಂಟ್ರಾಕ್ಟು ಪುಟಿಗಿ ರದ್ದಾಗಲಿಕ್ಕೆ ಗುರಿಯಾಗಿ ಡಿಪಾಜಟ್ಟು ವಟ್ಟು ಮೊಬಲಗನ್ನು ಗಣನಿಗೆ ತಾರದೆ ಪರತ್ತಿಗೆ ತಪ್ಪಿದ ಕಂಟ್ರಾಕ್ಟುದಾರನ್ನ ಲುಕ್ಸಾನಿಗೆ ಗುರಿಪಡಿಸಿ ಕಂಟ್ರಾಕ್ಟು ಪುನಹ ವಿಕ್ರಯಿಸಲ್ಪಡುವದು. ಸದರೀ ಡಿಪಾಜಿಟ್ ಮೊಬಲಗು ಗವರ್ಮೆಂಟಿಗೆ ಶೇರಿಸಿಕೊಳ್ಳಲ್ಪಡುವದು ಮತ್ತು ಬಾಕಿ ಮೊಬಲಗು ವಿಷಯದಲ್ಲಿ ರೆವಿನ್ಯೂ ಕಂದಾಯದ ಮೊಬಲಗಿನಂತೆ ವಸೂಲ್ಮಾಡಲ್ಪಡುವದು.

VI. ಕಂಟ್ರಾಕ್ಟುದಾರ್ರು ಯಾವ ಗಿಡಗಳಿಂದ ಅರಗು ತೆಗದುಕೊಂಡು ಹೋಗುರ್ತಾರೋ ಅಂತಾ ಅರಗಿನ ಗಿಡಗಳನ್ನು ಕತ್ತರಿಸುವದಕ್ಕೂ ನೀಗಿಸುವದಕ್ಕೂ ಯಾ ಅರೂಪ ಪಡಿಸುವದಕ್ಕೂ ಅಧಿಕಾರವನ್ನು ಹೊಂದಿರುವದಿಲ್ಲ.

VII. ಇನಾಂದಾರ್ರುಗಳಿಗೆ ಸ್ಥಿರಪಟ್ಟರುವ ಹಕ್ಕಿನ ವಿಷಯದಲ್ಲಿ ಕಂಟ್ರಾಕ್ಟುದಾರ್ರು ಪ್ರವೇಶಿಸಕೂಡದು.

VIII. ಹರಾಜು ಕಾಲದಲ್ಲಿ ಜಾಲ್ರೀ ಗಿಡಗಳು ಇರತಕ್ಕ ಬಗರ್ ಹಿಡುವಳಿ ಜಮೀನುಗಳು ಕಂಟ್ರಾಕ್ಟು ಜಾರೀಲಿರುವ ಕಾಲದಲ್ಲಿ ಸಾಗುವಳಿಗೆ ತೆಗದುಕೊಂಡ ಪಕ್ಷ ಕಂಟ್ರಾಕ್ಟುದಾರ ತನ್ನ ಕಂಟ್ರಾಕ್ಟು ಆಖೈರಾಗುವ ವರಿಗೂ ಅಂತಾ ಗಿಡಗಳಲ್ಲಿ ಅರಗು ಜಮಾಯಿಸಿಕೊಳ್ಳತಕ್ಕ ಹಕ್ಕುವುಳ್ಳವನಾಗಿ ಇರತಕ್ಕದ್ದು.

IX. ಕಾರಣಗಳನ್ನು ತೋರಿಸದೇನೇ ಯಾವ ಸವಾಲನ್ನಾದರೂ ಅಂಗೀಕರಿಸುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಡೆಪ್ಯೂಟಿ ಕಮ್ಮಿಷನರವರು ಸ್ವತಂತ್ರರಾಗಿರುತ್ತಾರೆ.

ಎಂ. ನಾರಾಯಣರಾವ್,
ಅಸಿಸ್ಟೆಂಟ್ ಡೆಪ್ಯೂಟಿ ಕಮ್ಮಿಷನರ್.

ಮೈಸೂರ್ ಫಾರೆಸ್ಟ್ ಡಿಪಾರ್ಟ್‌ಮೆಂಟ್.

ಕೋಲಾರ್ ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 28ನೇ ಫಿಬ್ರವರಿ 1896ನೇ ಇಸವಿ, ಮೊಕ್ಕಾಂ ಚಿಕ್ಕಬಳ್ಳಾಪುರ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

(1.) ಕೋಲಾರ್ ಡಿಸ್ಟ್ರಿಕ್ಟಿಗೆ ಸೇರಿದ ತಮೋಂ ತಾಲ್ಲೂಕುಗಳಲ್ಲೂ ಫಾರೆಸ್ಟುಗಳಲ್ಲೂ ಸಹ, ತೆಂಗಡಿ ಮತ್ತು ಕಕ್ಕೆ ಚಕ್ಕೆಯನ್ನ ಜಮಾಯಿಸತಕ್ಕ ಬಗ್ಯೆ ಲೈಸೆನ್ಸು ಕೊಡತಕ್ಕ ಪದ್ಧತಿಯನ್ನ ನಿಲ್ಲಿಸಬೇಕೆಂದು ಹುಕುಂ ಜಾರಿಯಾಗಿರುತ್ತೆ.

(2.) ಇದಕ್ಕೆ ಮೊದಲು ಲೈಸೆನ್ಸು ಪಡೆದಿರುವ ಜನಗಳು ಅವರವರ ಲೈಸೆನ್ಸಿನಲ್ಲಿ ಕಂಡ ಚಕ್ಕೆಯನ್ನು ನಿಶ್ಶೇಷವಾಗಿ ಮುಂದಿನ ಏಪ್ರಿಲ್ ತಾರೀಖು 15ರ ಒಳಗಾಗಿ ಸಾಗಿಸಿಕೊಂಡು ಹೋಗತಕ್ಕದ್ದು. ಆ ತಾರೀಖು ಕಳೆದನಂತರ ಸದರೀ ಚಕ್ಕೆಯನ್ನ ಜಮಾಯಿಸುವದಕ್ಕಾಗಲಿ, ಡಿಸ್ಟ್ರಿಕ್ಟಿನಲ್ಲಿ ದಾಸ್ತಾನ್ ಇಡುವದಕ್ಕಾಗಲಿ, ಅಥವಾ ರಫ್ತು ಮಾಡತಕ್ಕ ಬಗ್ಯಾಗಲಿ ಯಾವ ಸಂದರ್ಭದಲ್ಲೂ ಅವಕಾಶ ಕೊಡುವದಿಲ್ಲ.

(3.) ಡಿಸ್ಟ್ರಿಕ್ಟ ಮಜಕೂರ ತಾಲ್ಲೂಕುಗಳಲ್ಲಿ ಈ ಬಾಬುಗಳನ್ನ ಜಮಾಯಿಸಿಕೊಳ್ಳತಕ್ಕ ಹಕ್ಕನ್ನು ಇಜಾರೇದಾರ್ರಗಳಿಗೆ ಬಹಿರಂಗವಾದ ಹರಾಜಿನಲ್ಲಿ ಪೈಟುಪೈಟ್ಟಿಯಿಂದ ಮೊಕರೂರ್ ಮಾಡಲಾಗುತ್ತದೆ. ಸದರೀ ಹರಾಜಿನ ಕ್ರಮ ಮತ್ತು ಷರತ್ತುಗಳನ್ನ ಕಂಡು ಅಲಾಹಿದ ನೋಟಿಸ್ ಜಾರಿಯಾಗಿರುತ್ತೆ. ಈ ಬಾಬುಗಳನ್ನ ಇಜಾರೇಮಾಡಬೇಕೆಂದು ಉದ್ದೇಶಿಸುವವರು ಕೋಲಾರ್ ಡಿಸ್ಟ್ರಿಕ್ಟ ಫಾರೆಸ್ಟ್ ಆಫೀಸಿಗೆ ಅರ್ಜಿಯನ್ನ ಬರೆದು ನೋಟಿಸುಗಳನ್ನ ತರಿಸಿಕೊಂಡು ತಪ್ಪಿಲ್ಲದೆ ತಿಳದುಕೊಳ್ಳಬೇಕಾಗಿ ಕೋರಲ್ಪಟ್ಟಿದೆ.